ಶ್ರೀ ವಾಟಾಳ್ ನಾಗರಾಜ್ : ಇದರ ವಿಷಯ ಸದನದಲ್ಲಿ ಮೊದಲಿನಿಂದಲೂ ಕೇಳಿ ಬರುತ್ತದೆ, ನಾವು ಹೇಳುತ್ತಲೇ ಇದ್ದೇವೆ, ಇದಕ್ಕಾಗಿ ರಚಿಸಲಾಗಿದ್ದ ಜಾಗೃದ ದಳ ಏನಾಯಿತು ? ಸರ್ಕಾರ ಇದರ ಕಡೆ ಗಮನ ಕೊಟ್ಟಿದೆಯೆ? ಪ್ರಶ್ನೆ ಪತ್ರಿಕೆಗಳು ಪರೀಕ್ಷೆ ನಡೆಯುವುದಕ್ಕಿಂತ ಮುಂಚೆ ಬಯಲಾದರೆ ಚೆನ್ನಾಗಿ ಓದುತ್ತಿರತಕ್ಕಂಥ ವಿದ್ಯಾರ್ಥಿಗಳ ಪರಿಸ್ಥಿತಿ ಏನು ? ಒಂದು ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆ ಬೀದಿಯಲ್ಲಿ 150 ರೂಪಾಯಿಗಳಂತೆ ಮಾರಾಟವಾಗುತ್ತಿದೆ.

ಡಾ : ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು) :ಮಾನ್ಯ ಅಧ್ಯಕ್ಷರೇ, ಎಸ್ಎಸ್ಎಲ್ಸಿ, ಪರೀಕ್ಷೆ ಪ್ರಾರಂಭವಾಗುವುದಕ್ಕಿಂತ ಮುಂಚೆ ನಾವು ವಿರೋಧ ಪಕ್ಷಗಳ ಎಲ್ಲಾ ನಾಯಕರುಗಳನ್ನು, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿದ್ದೆವು....

ಶ್ರೀ ವಾಟಾಳ್ ನಾಗರಾಜ್ : ನಮಗೆ ಯಾವುದೂ ಪತ್ರ ಬಂದಿಲ್ಲ, ಯಾವುದೇ ಸಭೆಗೆ ನಮ್ಮನ್ನು ಕರೆದಿಲ್ಲ. ಏಕೆ ತಾವು ಈ ರೀತಿ ಮಾತನಾಡುತ್ತಿದ್ದೀರಿ? ನಮ್ಮನ್ನು ಯಾವೊತ್ತು ಕರೆದಿದ್ದಿರಿ ? ಒಬ್ಬರನ್ನೂ ಕರೆದಿಲ್ಲ, ಒಂದು ದಿವಸವೂ ಸಭೆ ಕರೆದಿಲ್ಲ.

ಡಾ : ಹೆಚ್.ಡಿ.ಲಮಾಣಿ : ನಾನು ಸಭೆ ಕರೆದಿದ್ದಂತೂ ನಿಜ, ಎಲ್ಲರಿಗೂ ನೋಟೀಸ್ ಕಳುಹಿಸಿದ್ದೇನೆ. ಆದರೆ, ಸಭೆಗೆ ಬರದಿರುವುದು ಬೇರೆ ವಿಷಯ.

ಶ್ರೀ ವಾಟಾಳ್ ನಾಗರಾಜ್ : ಇದು ಸತ್ಯಕ್ಕೆ ದೂರವಾದಂಥ ಮತ್ತು ಯಾವೊತ್ತು ನೀವು ಸಭೆ ಕರೆದಿದ್ದೀರಿ ? ಒಂದೂ ಪತ್ರವೂ ನಮಗೆ ಬಂದಿಲ್ಲ ಅಥವಾ ನಮ್ಮ ಸಹಿಯನ್ನಾದರೂ ತೆಗೆದುಕೊಳ್ಳಬೇಕು ತಾನೇ ?

ಡಾ : ಹೆಚ್.ಡಿ.ಲಮಾಣಿ : ನಾನು ಹೇಳುತ್ತಿರುವಂತಹ ಮಾತಿನ ಅರ್ಥವಿಷ್ಟೆ; ನಾನು ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಅಧಿಕಾರಿಗಳನ್ನು ಕರೆಸಿ ಈ ಹಿನ್ನೆಲೆಯಲ್ಲಿ ಎಲ್ಲಾ ರೀತಿಯ ಪ್ರಿಕಾಷನರಿ ಮೆಜರ್ಸ್ ತೆಗೆದುಕೊಂಡಿದ್ದೇನೆ. ಏಕೆಂದರೆ, ಒಂದೊಂದು ವೇಳೆ ಗೆಸ್ ಕೊಶ್ಚನ್ಸ್ ಎನ್ನುವ ಪ್ರಶ್ನೆಪತ್ರಿಕೆ ಹೊರ ಬರುತ್ತದೆ. ಇದರ ಬದಲು ಪ್ರಶ್ನೆಪತ್ರಿಕೆ ನಿಜವಾಗಿಯೂ ಬಯಲಾಗಿದ್ದರೆ ನಾನು ಅನಿವಾರ್ಯವಾಗಿ ಪರೀಕ್ಷೆಯನ್ನು ಮುಂದಕ್ಕೆ ಹಾಕಬೇಕಾಗುತ್ತದೆ. ಏಕೆಂದರೆ ತಾವು ಇದರ ಬಗ್ಗೆ ಈಗಾಗಲೆ ಹೇಳಿದ್ದೀರಿ. ನಾನು ಆ ಸುದ್ದಿ ಮುಟ್ಟಿದ ಕೂಡಲೇ ಆಲ್ಲಿಗೆ ಅಧಿಕಾರಿಗಳನ್ನು ಕಳಿಸಿದ್ದೇನೆ. ಅವರು ಒಂದು ವೇಳೆ ಈ ರೀತಿ ಪತ್ರಿಕೆ ಬಯಲಾಗಿರುವುದು ನಿಜವೆಂದು ಹೇಳಿದರೆ ನಾನು ಪರೀಕ್ಷೆಯನ್ನು ಮುಂದಕ್ಕೆ ಹಾಕುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಪರೀಕ್ಷೆಯನ್ನು ಮುಂದೆ ಹಾಕುವುದು ಬೇರೆ ವಿಚಾರ. ವಿದ್ಯಾರ್ಥಿಗಳು ರಾತ್ರಿ ಹಗಲು ಓದಿಕೊಂಡು ಬಂದಿರುತ್ತಾರೆ. ಇವರ ಬೇಜವಾಬ್ದಾರಿಯಿಂದ ಹಗಲೂ ರಾತ್ರಿ ಕಷ್ಟಪಟ್ಟು ಓದಿಕೊಂಡಿರತಕ್ಕ ವಿದ್ಯಾರ್ಥಿಗೆ ಮತ್ತೆ ಮತ್ತೆ ಪರೀಕ್ಷೆ ಮಾಡುವುದರ ಮೂಲಕ ಅವರಿಗೆ ಶಿಕ್ಷೆಯನ್ನು ಕೊಡುವುದು ಯಾವ ನ್ಯಾಯ?

(ಗೊಂದಲ)

ಡಾ : ಹೆಚ್.ಡಿ.ಲಮಾಣಿ : ನಾನು ಪರಿಕ್ಷೆಯನ್ನು ಮುಂದಕ್ಕೆ ಹಾಕಿಸುತ್ತೇನೆ. ಅದಷ್ಟೆ ಅಲ್ಲ, ಯಾವ ಅಧಿಕಾರಿಗಳು ಇದಕ್ಕೆ ಜವಾಬ್ದಾರರಾಗಿದ್ದಾರೆ ಅವರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ವಿದ್ಯಾರ್ಥಿಗಳಿಗೆ ಒಂದು ವೇಳೆ ಅನ್ಯಾಯವಾಗಿದ್ದರೆ, ತೊಂದರೆಯಾಗಿದ್ದರೆ ನಾನು ಕ್ಷಮೆಯನ್ನು ಕೇಳುವೆ. ಒಂದೊಂದು ವೇಳೆ ಈ ರೀತಿ ಆಗುತ್ತದೆ. ಆ ರೀತಿ ಆಗಬಾರದೆಂದೇ ನಾನು ಎಲ್ಲಾ ಪ್ರಿಕಾಷಿನರಿ ಮೆಜರನ್ನು ತೆಗೆದುಕೊಂಡಿದ್ದೆ, ಪೋಲೀಸ್ ಇಲಾಖೆಯವರನ್ನೂ ಕರೆದಿದ್ದೆ, ಕೌನ್ಸಿಲ್‌ನಲ್ಲಿರುವ ಶಿಕ್ಷಕರ ಕೇತ್ರದಿಂದ ಬಂದವರನ್ನು, ಪದವೀಧರಕ್ಷೇತ್ರದಿಂದ ಬಂದವರನ್ನು ಮತ್ತು ವಿರೊಧ ಪಕ್ಷದ ನಾಯಕರೂ ಮತ್ತು ಸಭಾ ನಾಯಕರನ್ನೆಲ್ಲಾ ಸಭೆಗೆ ಕರೆಸಿ ಮಾತನಾಡಿದ್ದೇನೆ. ನನ್ನ ಕರ್ತವ್ಯವನ್ನು ನಾನು ಪ್ರಾಮಾಣಿಕವಾಗಿ ಮನಸಾಪೂರ್ವಕವಾಗಿ ಮಾಡಿದ್ದೇನೆ. ಒಂದು ವೇಳೆ ಇದರಲ್ಲಿ ಏನಾದರೂ ಚ್ಯುತಿಯಾಗಿದ್ದರೆ, ಒಂದು ವೇಳೆ ನಮ್ಮ ಅಧಿಕಾರಿಗಳು ಇದರಲ್ಲಿ ಅಲಕ್ಷವನ್ನು ತೋರಿದ್ದರೆ, ಒಂದು ವೇಳೆ ನಮ್ಮ ಅಧಿಕಾರಿಗಳು ಅಲಕ್ಷವನ್ನು ತೋರಿದ್ದರೆ, ಒಂದು ವೇಳೆ ನಮ್ಮ ಅಧಿಕಾರಿಗಳು ಇದರಲ್ಲಿ ಇದ್ದರಿಂದ ಏನಾದರೂ ಲಾಭವನ್ನು ಪಡೆದುಕೊಂಡಿದ್ದರೆ ನಾನು ಸೂಕ್ತವಾದಂಥ ತನಿಖೆಯನ್ನು ಮಾಡಿಸಿ ಅವರ ವಿರುದ್ದ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇದು ನಿಜವಾಗಿಯೂ ಬಯಲಾಗಿದ್ದ ಪೇಪರ್ ಆಗಿದ್ದರೆ ನಾನು ಪರಿಕ್ಷೆಯನ್ನು ಮುಂದಕ್ಕೆ ಹಾಕುತ್ತೇನೆ.

ಡಾ : ಎಸ್. ಬಿ. ನಂಜಪ್ಪ : ಇಂದು ಮೂರು ಗಂಟೆಗೆ ಪರೀಕ್ಷೆಇದೆ, ಇದು ಹೇಗೆ ಸಾಧ್ಯ ?

ಉಪಾಧ್ಯಕ್ಷರು : ನಂಜಪ್ಪನವರೆ ದಯಮಾಡಿ ಕುಳಿತುಕೊಳ್ಳಿ.

ಶಾಸನ ರಚನಾ ಕಾರ್ಯಕ್ರಮಗಳು
ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ, 1993.
ಪರ್ಯಾಲೋಚನಾ ಪ್ರಸ್ತಾವ (ಮುಂದುವರಿದ ಚರ್ಚೆ)

* ಶ್ರೀ ವೈ.ಕೆ.ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, ನಾನು ಸನ್ಮಾನ್ಯ ಮಂತ್ರಿಗಳಿಗೆ ಋಣಿಯಾಗಿದ್ದೇನೆ. ಈ ವಿಧೇಯಕದ ಸೆಕ್ಷೆನ್ 152 ಮತ್ತು 193 ಹಾಗೂ 62(ಸಿ) ಯನ್ನೂ ಕೂಡ ಓದಿದ್ದೇನೆ. ಈ ಮೂರೂ ಕೂಡ ಅಧಿಕಾರದ ವ್ಯಾಪ್ತಿಯನ್ನು ತಿಳಿಸುವಂಥ ಕಲಂಗಳು. ನನ್ನ ಪ್ರಾರ್ಥನೆ ಏನೆಂದರೆ, ಗ್ರಾಮಪಂಚಾಯಿತಿಯ ಅಧಿಕಾರಿಗಳ ಮತ್ತು ನೌಕರರ ಮೇಲೆ ಮೇಲ್ವಿಚಾರಣೆ ನಡೆಸತಕ್ಕದ್ದು, ನಿಯಂತ್ರಣವನ್ನು ಹೊಂದಿರತಕ್ಕದ್ದು. This power is given to the Adyaksha or the Chairman or the chairperson of the Village Panchayat, ಇದೇ ಒಂದು ಕ್ಲಾಸ್‌ನ್ನು ಜಿಲ್ಲಾಪಂಚಾಯಿತಿಯ ಅಧಿಕಾರಿಗಳು ಮತ್ತು ನೌಕರರ ಕಾರ್ಯ ವಿಚಾರಣೆಯಮೇಲೆ,

ತಾಲ್ಲೂಕು ಪಂಚಾಯಿತಿ ಮತ್ತು ಅದರ ಅಧಿಕಾರಿಗಳ ಮೇಲೆ, ಅಧಿಕಾರಿ ಮತ್ತು ನೌಕರರ ಮೇಲೆ ಮೇಲ್ವಿಚಾರಣೆಯನ್ನು ನಡೆಸತಕ್ಕಂಥ ಕಲಂನ್ನು 152 ಮತ್ತು 193 ರಲ್ಲಿ ತರುವುದಾದರೆ ಅದು ಸರಿಯಾಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ : ಕಾನೂನು ಬಲ್ಲವರು ತಾವು; ಹಾಗೂ ಹಿರಿಯ ಸದಸ್ಯರು, ಈಗ ಪಂಚಾಯಿತಿಗೆ ಸಂಬಂಧಪಟ್ಟಂತೆ 62 ನೇ ಕ್ಲಾಸ್ ಏನು ಇದೆ, ತಾಲ್ಲೂಕು ಮಟ್ಟಕ್ಕೆ ಸಂಬಂಧಪಟ್ಟ 152ರ ಕ್ಲಾಸ್ ಮತ್ತು ಜಿಲ್ಲಾಮಟ್ಟಕ್ಕೆ ಸಂಬಂಧಪಟ್ಟ 193 ಕ್ಲಾಸ್, ಈ ಮೂರು ಕ್ಲಾಸ್‌ನಲ್ಲಿ "ಸೂಪರ್‌ವಿಷನ್ ಅಂಡ್ ಕಂಟ್ರೋಲ್", ಎನ್ನತಕ್ಕ ಪದಗಳನ್ನು ಸ್ಪಷ್ಟವಾಗಿ ನಾವು ಉಪಯೋಗಿಸಿದ್ದೇವೆ. ಅದರಲ್ಲಿ ವ್ಯತ್ಯಾಸ ಮಾಡತಕ್ಕ ಉದ್ದೇಶವಿಲ್ಲ. ರೀತಿಯಾದ ವ್ಯತ್ಯಾಸವನ್ನು ಹುಡುಕತಕ್ಕ ಪ್ರಯತ್ನವನ್ನು ದಯಮಾಡಿ ಮಾಡಬೇಡಿ, ನಿಮಗೆ ಬೇರೆ ಎಷ್ಟೋ ವಿಷಯಗಳು ಹೇಳಲು ಸಾಧ್ಯವಿದೆ, ಅದನ್ನು ಹೇಳಿ ಇಲ್ಲಿ. ಎಲ್ಲಿ ಸಮಸ್ಯೆ ಇಲ್ಲವೋ ಅಲ್ಲಿ ಸಮಸ್ಯೆಯನ್ನು ಹುಟ್ಟಿಸತಕ್ಕ ಪ್ರಯತ್ನವನ್ನು ತಾವು ಮಾಡಬೇಕಾಗಿಲ್ಲ.

ಶ್ರೀ ವೈ. ಕೆ. ರಾಮಯ್ಯ : ಇಲ್ಲದ ಸಮಸ್ಯೆಯನ್ನು ಸೃಷ್ಟಿಮಾಡಿ ವಿವಾದದ ಗೊಂದಲದಲ್ಲಿ ಬದುಕುವ ಪ್ರವೃತ್ತಿ ನನ್ನದಲ್ಲ. ಆದರೆ ವಾಸ್ತವಿಕತೆಯ ಜೊತೆಯಲ್ಲಿ ರಾಜಿಯನ್ನು ಮಾಡಿಕೊಳ್ಳುವಷ್ಟು ಅಶಕ್ತನೂ ಅಲ್ಲ. ನಾನು ಪುನಃ ಹೇಳುತ್ತಿದ್ದೇನೆ, ರಾಜ್ಯದಲ್ಲಿ ಶೇಕಡ 50 ಪರ್ಸೆಂಟ್ ಜನರಿಗೆ ಓದುವುದಕ್ಕೆ ಬರುತ್ತದೆ.ಸೆಕ್ಷನ್ 62(ಸಿ)ನಲ್ಲಿ ಗ್ರಾಮಪಂಚಾಯತಿ ಚುನಾಯಿತ ಅಧಿಕಾರಿಗಳಿಗೆ ಕೊಟ್ಟಿರುವಷ್ಟು ಅಧಿಕಾರವನ್ನು ಜಿಲ್ಲಾ ಪರಿಷತ್ತಿನ ಮತ್ತು ತಾಲೂಕುಮಟ್ಟದ ಚುನಾಯತಿ ಪ್ರತಿನಿಧಿಗಳಿಗೆ ಕೊಟ್ಟಿಲ್ಲ. ಎರಡನೇಯದಾಗಿ ಹಿಂದೆ ಜನತಾಪಕ್ಷ ತಂದಿದ್ದಂಥ ವ್ಯವಸ್ಥೆಯಲ್ಲಿ ಚುನಾಯತಿ ಪ್ರತಿನಿಧಿಗಳಿಗೆ ಇದ್ದಂಥ ನಿರ್ವಾಹಕ ಜವಾಬ್ದಾರಿಯನ್ನು ಕಿತ್ತುಹಾಕಿದ್ದಾರೆ. ಈ ನನ್ನ ವಾದ ಸರಿಯೋ, ಅಥವಾ ಸರಿಯಿಲ್ಲವೋ ಎಂಬುದನ್ನು ಕೇವಲ ಇಲ್ಲಿ 225 ಜನ ಕೂತು ಕೇಳುವುದಲ್ಲ, ನಾಳೆ ನನ್ನ ಸ್ನೇಹಿತರು ಪತ್ರಿಕೆಗಳಲ್ಲಿ ಹೊರಗಡೆ ಓದಿ ರಾಮಯ್ಯ ಹೇಳಿರತಕ್ಕದ್ದು ಸರಿಯೇ, ಅಥವಾ ಇಲ್ಲವೇ ಎಂಬುದನ್ನು ನೋಡುತ್ತಾರೆ. ಅದ್ದರಿಂದ ನಾನು ಪುನಃ ಹೇಳುತ್ತೇನೆ, ಮಂಡಲ್ ಪಂಚಾಯತಿ ಅಧ್ಯಕ್ಷರಿಗೆ, ಚುನಾಯಿತ ಪ್ರತಿನಿಧಿಗಳಿಗೆ ಕೊಟ್ಟಿರುವಷ್ಟು ಅಧಿಕಾರವನ್ನು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿನ ಚುನಾಯತಿ ಪ್ರತಿನಿಧಿಗಳಿಗೆ ಕೊಟ್ಟಿಲ್ಲ ಎನ್ನತಕ್ಕದ್ದು ನನ್ನ ವಾದ. ಆ ಅಧಿಕಾರವನ್ನು ತಾವು ಮೊಟಕು ಮಾಡಿದ್ದೀರಿ. ನಿನ್ನೆ ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಅದರಲ್ಲಿ ನನಗೆ ಸ್ವಲ್ಪಮಟ್ಟಿಗೆ ನೋವಾಗುವಂಥ ಸಂಗತಿ ಎಂದರೆ, ಹಿಂದೆ ಈ ವ್ಯವಸ್ಥೆಯ ಕೆಳಗೆ ಚುನಾವಣೆಗಳ ನ್ನುನಡೆಸಿ ಜನತೆಯ ಕೈಗೆ ಅಧಿಕಾರವನ್ನು ಕೊಟ್ಟು ಪಡೆದ ಅನುಭವದ ಆಧಾರದಮೇಲೆ ಕೆಲವು ಬದಲಾವಣೆಗಳನ್ನು ತರಬೇಕಾಯಿತೆಂದು ತಾವು ಹೇಳುತ್ತಿದ್ದೀರಿ. ಅಂದರೆ ಜನಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಟ್ಟರೆ ಅದನ್ನು ಚಲಾಯಿಸುವಂಥೆ ಅಧಿಕಾರ ಇಲ್ಲ, ಬುದ್ದಿಇಲ್ಲ,ಎಲ್ಲಕ್ಕಿಂತ ಹೆಚ್ಚಾಗಿ ಅವರಿಗೆ ನೈತಿಕ ಬಲ ಇಲ್ಲ ಎನ್ನತಕ್ಕ ವಾದವನ್ನು 1985 ರಲ್ಲಿ ಇದೇ ಸದನದಲ್ಲಿ ಒಬ್ಬಮಾನ್ಯ ಸದಸ್ಯರು ಹೇಳಿದಂಥ ವಾದ ಇದೆ. ನನ್ನಲ್ಲಿ ಇದರ ಬಗ್ಗೆ ರಿಕಾರ್ಡ್ ಇದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವ ಸಂದರ್ಭದಲ್ಲೂ ಕೂಡ ಬ್ರಿಟೀಷರು ಹೇಳಿದ್ದರು. ಆದರೆ ಒಂದು ಮಾತನ್ನು ತಮ್ಮಲ್ಲಿ ಕೇಳಬಯಸುತ್ತೇನೆ. ಈ ರಾಜ್ಯದ ಯಾವುದೇ ಒಂದು ಜಿಲ್ಲಾ ಪರಿಷತ್ತಿನ ಅಧ್ಯಕ್ಷನಮೇಲೆ ಅದು ಹಾಸನದ ಶಿವರಾಮು ಇರಬಹುದು, ಅಥವಾ ಚಿತ್ರದುರ್ಗದ ಬಕ್ಕೇಶ್ ಇರಬಹುದು, ಬೇರೆ ಯಾರೇ ಆಗಲಿ